Bailing is the principle. Refusal to bail is an exception; that is the principle that is being followed. ಅವರ ಮನಸ್ಸಿನ ಉದ್ವೇಗ ಮತ್ತು ಕೋಪವನ್ನು ನಾನು ತಿಳಿದುಕೊಂಡಿದ್ದೇನೆ. ಕಾನೂನಿನಲ್ಲಿ ಬದಲಾವಣೆ ಆಗದ ಹೊರತು ಅವರು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ. ಆದರೂ ಕೂಡ ಈ ರೀತಿ ಪ್ರಕರಣಗಳು ಸಮಾಜದಲ್ಲಿ ಬಂದಾಗ ಬೈಲ್ ಮೇಲೆ ಬಿಡದಿದ್ದರೆ ಮಾತ್ರ ಇದು ನಿಲ್ಲುತ್ತದೆಂದು ಅನ್ನಿಸುವುದಿಲ್ಲ. ಆದು ಒಂದು ಮಾರ್ಗ ಎಂದು ಇಟ್ಟುಕೊಳ್ಳಬಹುದು. ಯಾರೇ ಆಗಲಿ ತಪ್ಪಿತಸ್ಥರು ಎಂದು ಶೀರ್ಮಾನ ಆಗುವವರೆಗೆ ಬೇಲ್ ಮೇಲೆ ಬಿಡುವುದಕ್ಕೆ ಅವಕಾಶ ಇದೆ.

೨—೩೦ ಪಿ. ಎಂ.

ಅವರ ಕೋಪ ಮತ್ತು ಆಗ್ರಹವನ್ನು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಈ ಕಾನೂನನ್ನು ತಿದ್ದುಪಡಿ ಮಾಡದ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಒಂದು ಸಮಿತಿಯನ್ನು ನಿರ್ಮಾಡಾ ಮಾಡಲಾಗಿದೆ. ಮಾನ್ಯ ಸದಸ್ಯರೂ ಕೂಡ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಕೇಂದ್ರ ಸರ್ಕಾರದವರು ಕಾನೂನನ್ನು ಬದಲಾಯಿಸಿದರೆ ನನ್ನ ಅಭ್ಯಂತರ ಏನೂ ಇಲ್ಲ. ನಾನೂ ಅವರ ಕಡೆ ನಾದ ಮಾಡುವುದಕ್ಕೆ ಸಿದ್ಧನಾಗಿದ್ದೇನೆ.

ಮನಿಹಾಳ್ ಗ್ರಾಮದಲ್ಲಿ ಪೋಲೀಸರಿಂದ ನಡೆದ ದೌರ್ಜನ್ಯ

ಶ್ರೀ ಆರ್. ಟಿ. ದೇಸಾಯಿ (ರಾಮದುರ್ಗ).—ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ರಾಮದುರ್ಗ ತಾಲ್ಲೂಕು ಮನಿಹಾಳ್ ಗ್ರಾಮದಲ್ಲಿ ಪೋಲೀಸರಿಂದ ನಡೆದಿರುವ ದೌರ್ಜನ್ಯದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ,

ಶ್ರೀ ಎ, ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ನಗರಾಭಿವೃದ್ಧಿ ಮಂತ್ರಿಗಳು) —ಮಾನ್ಯ ಅಧ್ಯಕ್ಷರೆ, ಗೃಹ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ.

ಮನಿಹಾಳ್ ಸಹಕಾರಿ ಸಾಲದ ಬ್ಯಾಂಕ್ ನಿಯಮಿತ ಈ ಸಂಸ್ಥೆಯ ಅಧ್ಯಕ್ಷರೆನ್ನಲಾದ ಶ್ರೀ ಐ. ಡಿ. ಕಳಸಣ್ಣನವರ್ ಎಂಬುವರ ದೂರಿನ ಮೇರೆಗೆ ರಾಮದುರ್ಗ ಆರಕ್ಷಕ ಠಾಣೆಯಲ್ಲಿ. ಭಾರತೀಯ ದಂಡ ಸಂಹಿತೆ ೪೦೮,೪೦೯ ಕಲಮುಗಳ ಪ್ರಕಾರ ೩-೧-೧೯೮೫ ರಂದು ಅಪರಾಧ ಸಂಖ್ಯೆಯ ೩.೮೫ ಎಂಬುದಾಗಿ ಮೊಕದ್ದಮೆ ಒಂದನ್ನು ದಾಖಲು ಮಾಡಿಕೊಳ್ಳಲಾಯಿತು. ಶ್ರೀ ಕಳಸಣ್ಣನವರ್ ಕೊಟ್ಟಿರುವ ದೂರಿನಲ್ಲಿ ಸಹಕಾರಿ ಸಂಸ್ಥೆಯ ಮ್ಯಾನೇಜರ್ ಹಾಗೂ ಕ್ಯಾಷಿಯರ್, ಇವರುಗಳು ಸಂಸ್ಥೆಗೆ ಸೇರಿದ ೪,೫೮,೩೨೨ ರೂಪಾಯಿಗಳನ್ನು ದುರುಪಯೋಗ ಮಾಡಿದಾರೆಂದು ಆಪಾದಿಸಲಾಗಿದೆ. ಆಪಾದಿತರಲ್ಲಿ ಒಬ್ಬರನ್ನೂ ದಸ್ತಗಿರಿ ಮಾಡಲಾಗಿ ಕೋರ್ಟಿಗೆ ಹಾಜರುಪಡಿಸಲಾಯಿತು. ಅವರು ಕೋರ್ಟಿನಿಂದ ಜಾಮೀನಿನ ಮೇಲೆ ಬಿಡುಗಡೆಯನ್ನು ಹೊಂದಿದ್ದಾರೆ

೨. ತನಿಖಾ ಸಮಯದಲ್ಲಿ ಆಪಾದಿತರು ಕೊಟ್ಟ ಸುಳುವಿನ ಮೇಲೆ ೪೭ ತೊಲ ಬಂಗಾರವನ್ನು ಬೇರೆ ಬೇರೆಯವರಿಂದ ವಶಪಡಿಸಿಕೊಳ್ಳಲಾಯಿತು. ಆಪಾದಿತರು ಮನಿಹಾಳ್ ಗ್ರಾಮದ ನಿವಾಸಿ ಬಸಪ್ಪ ರಾಮಣ್ಣನವರಿಗೆ ಬ್ಯಾಂಕಿಗೆ ಸೇರಿದ ೪೫೫ ತೊಲ ಬಂಗಾರವನ್ನು ವಾಪಸ್ಸಿದ್ದಾರೆಂದು ತಿಳಿದು ಬಂದಿದೆ,

೩. ಬಸಪ್ಪ ರಾಮಣ್ಣನವರ್ ತಲೆ ತಪ್ಪಿಸಿಕೊಂಡಿದ್ದರಿಂದ ಅತನನ್ನು ಕೂಡಲೇ ದಸ್ತಗಿರಿ ಮಾಡಲಾಗಲಿಲ್ಲ. ಈತ ಬೆಳಗಾಂ ಸೆಷನ್ಸ್ ಕೋರ್ಟಿನಿಂದ ನಿರೀಕ್ಷಣಾ ಜಾಮೀನನ್ನು ಪಡೆದಿದ್ದಾನೆ. ದಿನಾಂಕ ೨೦-೩-೧೯೮೫ ರಂದು ರಾಮದುರ್ಗ ಸರಕಾರಿ ಆಸ್ಪತ್ರೆಗೆ ತನ್ನ ಮೇಲೆ ಹಲ್ಲೆ ಮಾಡಿದ ರೆಂಬುದರ ಕಾರಣ ಸೇರಿದ್ದಾನೆ. ಆಸ್ಪತ್ರೆಯಲ್ಲಿ ಇಡಲಾಗಿರುವ ಆಪಘಾತ ರಿಜಿಸ್ಟರ್‌ನಲಿ ಬಸಪ್ಪನ ಮೇಲೆ ಯಾರು ಹಲ್ಲೆ ಮಾಡಿದರು ಎಂದು ನಮೂದಿಸಲಾಗಿಲ್ಲ.

೪. ಪೋಲೀಸರು ಮನಿಹಾಳ್ ಗ್ರಾಮದ ನಿವಾಸಿಗಳ ಮೇಲೆ ಬರ್ಬರ ಕೃತ್ಯಗಳನ್ನು ನಡೆಸುತ್ತಿದ್ದಾರೆ ಎಂಬ ಹಾಗೂ ಹಣ ವಸೂಲಿ ಮಾಡುತ್ತಿದ್ದಾರೆಂಬ ಆಪಾದನೆಗಳು ನಿರಾಧಾರ ಆದವು ಚಿನ್ನವನ್ನು ತನಿಖೆಯ ಅಂಗವಾಗಿ ವಶಪಡಿಸಿಕೊಳ್ಳಲಾಗಿದೆ. ಪೊಲೀಸರು ಬಸಪ್ಪ ರಾಮಣ್ಣನವರ್ ಈತನಿಗೆ ಹಿಂಸೆಯನ್ನು ಕೊಟ್ಟಿಲ್ಲ,

ಶ್ರೀ ಆರ್. ಟಿ. ದೇಸಾಯಿ.—ಬಸಪ್ಪ ರಾಮಣ್ಣನವರ್ ಎಂಬುವರು ಬ್ಯಾಂಕಿಗೆ ಸಂಬಂಧಪಟ್ಟವರಲ್ಲ. ದಿನಾಂಕ ೨೦-೩-೨೫ರಂದು ಮಧ್ಯಾಹ್ನ ೩ ಗಂಟೆಗೆ ಪೋಲೀಸರು, ಬ್ಯಾಂಕಿನ ಅಧ್ಯಕ್ಷರು ಅವರ ಮನೆಗೆ ಹೋಗಿ ಬಸಪ್ಪ ರಾಮಣ್ಣನವರ್ ಅವರನ್ನು ಥಳಿಸಿದ್ದಾರೆ. ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡುಹೋಗಿ ಕೂಡ ಥಳಿಸಿದ್ದಾರೆ. ಹೆಣ್ಣು ಮಕ್ಕಳು ಬೇಡಿಕೊಂಡರೂ ಪೋಲೀಸರು ಮರ್ಯಾದೆ ಕೊಟ್ಟಿಲ್ಲ ಎಂದು ಲಿಖಿತ ಮೂಲಕ ಪತ್ರ ಕೊಟ್ಟಿದ್ದಾರೆ. ಪಿ.ಎಸ್.ಐ.ಅವರು ಹೆದರಿಸಿ ಬೆದರಿಸಿ ಹೊಡೆದು ಹಾಸ್ಪಿಟಲ್‌ನಲ್ಲಿ ಹಾಕಿದ್ದಾರೆ. ಅದರ ಬಗ್ಗೆ ಡಾಕ್ಟರ್ ಸರ್ಟಿಫಿಕೇಟ್ ಕೂಡ ಇದೆ. ಅದನ್ನು ಬೇಕಾದಗ ಸರ್ಕಾರದವರಿಗೆ ಕೊಡುತ್ತೇನೆ. ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಟೆಲಿಗ್ರಾಂ ಕೊಟ್ಟಿದ್ದಾರೆ. ಈಗ ಬಸಪ್ಪ ರಾಮಣ್ಣನವರ್ ಅವರು ಆಸ್ಪತ್ರೆಯಲ್ಲಿದ್ದಾರೆ. ಸಂಬಂಧಪಟ್ಟ ದಾಖಲೆಗಳನ್ನು ನಾನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ಸರ್ಕಾರದವರು ಸರಿಯಾಗಿ ಯೋಚನೆ ಮಾಡಿ ...ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಭಾಷಣ ಆಯಿತು. ಕ್ಲಾರಿಫಿಕೇಷನ್ ಮಾತ್ರ ತಾವು ಕೇಳಿ.

ಶ್ರೀ ಆರ್. ಟಿ. ದೇಸಾಯಿ.—ಕೂಡಲೇ ಪಿ.ಎಸ್.ಐ. ಅವರನ್ನು ಸಸ್ಪೆನ್ಷನ್‌ನಲ್ಲಿಟ್ಟು ಎನ್‌ಕ್ವೈರಿ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರಕ್ಕೆ ಬಂದ ತಿಳಿವಳಿಕೆ ಪ್ರಕಾರ ೪೫ ತೊಲ ಬಂಗಾರವನ್ನು ಬಸಪ್ಪನವರಿಗೆ ವಾರಿದ್ದು ಅವರನ್ನು ಶೋಧಿಸಿದಾಗ ಸ್ವಲ್ಪಮಟ್ಟಿಗೆ ಬಂಗಾರ ಸಿಕ್ಕಿದೆ. ಆ ಆಧಾರದ ಮೇಲೆ ಕೇಸ್ ಹಾಕಿದ್ದಾರೆ, ಮಾನ್ಯ ಸದಸ್ಯರು ಚಿತ್ರಹಿಂಸೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳಿವೆ ಎಂದು ಹೇಳಿದ್ದಾರೆ. ಅದನ್ನು ನನಗೆ ಕೊಟ್ಟರೆ ಅದರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಪೋಲೀಸರು ಚಿತ್ರಹಿಂಸೆ ಕೊಟ್ಟಿದ್ದರೆ ಪ್ರೈವೇಟ್ ಕಂಪ್ಲೇಂಟ್ ಕೊಡುವುದಕ್ಕೆ ಬರುತ್ತದೆ. ಮಾನ್ಯ ಸದಸ್ಯರು ಡಾಕ್ಟರ್ ಸರ್ಟಿಫಿಕೇಟ್ ಇದೆ ಎಂದು ಹೇಳಿದ್ದಾರೆ. ಅವರು ಅದನ್ನು ನನಗೆ ಕೊಟ್ಟರೆ ಅವರು ಹೇಳಿದ ಆಪಾದನೆಗಳು ನಿಜವೋ ಅಥವಾ ಸತ್ಯಕ್ಕೆ ದೂರವಾದುದೋ ಎಂಬುದನ್ನು ವಿಚಾರಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಸ್ತಾಪ ಮಾಡಿರತಕ್ಕ ವಿಷಯ ಬಹಳ ಗಂಭೀರವಾದುದು. ತಪ್ಪು ಮಾಡಿದ ಪೋಲೀಸ್ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಚಿವರಿಗೆ ಅಧಿಕಾರ ಇದೆ. ಅದರ ಪ್ರಕಾರ ತಗೆದುಕೊಳ್ಳಬಹುದು. ಲಕ್ಷ್ಮೀಸಾಗರ್ ಅವರು ಪ್ರೈವೇಟ್ ಕಂಪ್ಲೇಂಟ್ ಕೊಡತಕ್ಕ ವಿಚಾರ ಪ್ರಸ್ತಾಪ ಮಾಡಿದರು. ಪ್ರೈವೇಟ್ ಕಂಪ್ಲೇಂಟ್ ಕೊಡಲಿ ಎನ್ನುವುದಾದರೆ ಸರ್ಕಾರ ಏತಕ್ಕೆ ಇರಬೇಕು ? ಸರ್ಕಾರ ಮಲಗಿದ ಮೇಲೆ ಪ್ರೈವೇಟ್ ಕಂಪ್ಲೇಂಟ್ ಹಾಕುವುದು ಈ ರೀತಿ ಮಂತ್ರಿಗಳು ಹೇಳುವುದು ಒಳ್ಳೆಯದಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುವುದನ್ನು ನೀವು ಪೂರ್ತಿ ಕೇಳಲಿಲ್ಲಿ. ಡಾಕ್ಟರ್ ಸರ್ಟಿಫಿಕೇಟನ್ನು ನನ್ನ ಕೈಯಲ್ಲಿ ಕೊಟ್ಟರೆ ಅದನ್ನು ಅಧಿಕಾರಿಗಳಿಗೆ ಕೊಟ್ಟು ತನಿಖೆ ಮಾಡಿಸುತ್ತೇನೆ ಎಂದು ಮೊದಲು ನಾನು ಹೇಳಿದ್ದೇನೆ. ಅದರ ಜೊತೆಗೆ ಒಂದು ವೇಳೆ ಅದರಿಂದ ಅನುಕೂಲ ಆಗಲಿಲ್ಲ ಎಂದು ಇಟ್ಟುಕೊಳ್ಳಿ. 'ಬಿ' ಷೀಟ್, 'ಸಿ' ಷೀಟ್ ಫೈಲ್ ಮಾಡುತ್ತಾರೆ. ಸಿ.ಪಿ.ಸಿ. ೨೦೦ರ ಪ್ರಕಾರ ಪೋಲೀಸರ ಮೇಲೂ ಕೇಸ್ ಹಾಕುವುದಕ್ಕೆ ಬರುತ್ತದೆ ಎಂದು ಪ್ರಾಸ್ತಾವಿಕವಾಗಿ ಹೇಳಿದ್ದೇನೆ. ಅದನ್ನೇ ಮಾಡಿ ಎಂದು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಂಥ ಗಂಭೀರವಾದ ವಿಚಾರದಲ್ಲಿ ಸಂಬಂಧಪಟ್ಟ ಸಚಿವರೇ ಹೇಳಿಕೆ ಕೊಡುವುದು ಒಳ್ಳೆಯದು. ಗೃಹ ಸಚಿವರ ಪರವಾಗಿ ಬೇರೆ ಸಚಿವರು ಹೇಳಿಕೆ ಕೊಡುವ ಪದ್ಧತಿ ಒಳ್ಳೆಯದಲ್ಲ ತಕ್ಷಣ ಕ್ರಮ ತೆಗೆದುಕೊಳ್ಳುವ ಸಂದರ್ಭ ಸದನದಲ್ಲಿ ಬರುತ್ತದೆ. ಇಂಥ ಗಹನವಾದ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಉತ್ತರ ಕೊಟ್ಟು ಕ್ರಮವನ್ನು ತೆಗೆದುಕೊಂಡರೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದು.

ಅಧ್ಯಕ್ಷರು.—ಅವರು ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಆಮೇಲೆ ಈ ವಿಷಯ ತೆಗೆದುಕೊಳ್ಳಿ. ಮುಖ್ಯಮಂತ್ರಿಗಳೂ ಕೂಡ ಸದನದಲ್ಲಿಲ್ಲ. ಇವೊತ್ತು ಕೊನೇ ದಿವಸ. ಸದನದ ಕಾರ್ಯಕಲಾಪ ಯಾವರೀತಿ ನಡೆಯಬೇಕು ?

ಅಧ್ಯಕ್ಷರು.—ಕೌನ್ಸಿಲ್ಲಿಗೆ ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕೌನ್ಸಿಲ್ ಪ್ರಾರಂಭವಾಗುವುದು ೩–೩೦ಕ್ಕೆ. ಈಗ ನಡೆಯುತ್ತಿಲ್ಲ.

ತಾವು ಹೇಳಿದಿರಿ ಎರಡೂ ಮುಕ್ಕಾಲು ಗಂಟೆ ಎಂದು. ನಾವು ಎರಡೂ ಮುಕ್ಕಾಲು ಗಂಟೆಗೆ ಕುಳಿತ್ತಿದ್ದೇವೆ. ಆದರೆ ಮಾನ್ಯ ಸಚಿವರು ಎಲ್ಲಿ ಹೋದರು.

ಅಧ್ಯಕ್ಷರು.—ವಿಷಯಗಳು ಸಾಕಷ್ಟು ಇವೆ. ಇವತ್ತು ಸಭೆಯನ್ನು ಮುಂಗಿಸಬೇಕು...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಗೆ ಹೋದರು ? ತಮಗೆ ನಾವು ಸಹಕಾರ ನೀಡುತ್ತೇವೆ. ಸಭೆ ನಡೆಯುವಾಗ ಮುಖ್ಯ ಮಂತ್ರಿಗಳು ಇಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ವಿಷಯ ಬಹಳ ಇವೆ ಆ ವಿಷಯಕ್ಕೆ ಬರೋಣ.

ಶ್ರೀ ಎಸ್. ಬಂಗಾರಪ್ಪ.—ನಮಗೂ ಕಲಾಪಹರಣ ಮಾಡುವುದಕ್ಕೆ ಇಷ್ಟ ಇಲ್ಲ. ಮುಖ್ಯಮಂತ್ರಿಗಳು ಎಲ್ಲಿ ಎಂದು ನಾನು ಕೇಳುತ್ತಿದ್ದೇನೆ. ಇವೊತ್ತು ಸಭೆಯು ಕೊನೆಯ ದಿನವಾದ್ದರಿಂದ ಕೆಲವು ಮುಖ್ಯ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡುತ್ತೇವೆ. ಆದ್ದರಿಂದ ಅವರು ಇಲ್ಲಿಗೆ ಬಂದು ಕುಳಿತುಕೊಳ್ಳ ಬೇಕಾಗುತ್ತದೆ.

ಅಧ್ಯಕ್ಷರೆ. – ತಾವು ದಯಮಾಡಿ ಸಹಕಾರ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ನಾವು ಮೊದಲಿನಿಂದಲೂ ತಮಗೆ ಸಹಕಾರವನ್ನು ಕೊಡುತ್ತಾ ಬಂದಿದ್ದೇವೆ. ತಾವು ಅವರನ್ನು ಕರೆಯಿಸಿ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ವ್ಯವಸ್ಥೆ ಮಾಡುತ್ತೇನೆ

ನಿಯಮ ೩೩ಳಿರ ಕೆಳಗೆ ಚರ್ಚೆ

(ಶ್ರೀ ಪ್ರತಾಪಚಂದ್ರ ಶೆಟ್ಟಿ.—ಸದಸ್ಯರು ಗೈರುಹಾಜರಿ)

ಶ್ರೀ ವಸಂತ ಬಂಗೇರ.—ಸದಸ್ಯರು ಗೈರುಹಾಜರಿ)

(i) ವಿಜಾಪುರದ ಸಹಕಾರಿ ನೂಲಿನ ಗಿರಣಿ ಮುಚ್ಚಿರುವುದು.

ಶ್ರೀ ಬಾಬೂರೆಡ್ಡಿ ವಿ. ತುಂಗಲ್.—ಸನ್ಮಾನ್ಯ ಅಧ್ಯಕ್ಷರೆ, ವಿಜಾಪುರದಲ್ಲೊಂದು ಸಹಕಾರಿ ನೂಲಿನ ಗಿರಣಿಯಿದ್ದು ಅಡಳಿತಗಾರರ ಬೇಜವಾಬ್ದಾರಿಯಿಂದಾಗಿ ಅದು ಕಳೆದ ೪ ತಿಂಗಳಿನಿಂದ ಮುಚ್ಚಿದ್ದು ಆಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೫೦೦ಕ್ಕೂ ಮೇಲ್ಪಟ್ಟು ಕಾರ್ಮಿಕರು ಬೀದಿಪಾಲಾಗಿದ್ದಾರೆ. ಗಿರಣಿಯನ್ನು ಪುನರಾರಂಭಿಸಲು ಕಾರ್ಮಿಕರು ಅನೇಕ ಸಲ ಅನ್ನಸತ್ಯಾಗ್ರಹ ನಡೆಸುತ್ತಾ ಬಂದಿದ್ದಾರೆ. ಲೋಕಸಭಾ ಚುನಾವಣೆಯ ಕಾಲದಲ್ಲಿ ವಿಜಾಪುರಕ್ಕೆ ಬಂದಿದ್ದ ಮಾನ್ಯಮುಖ್ಯಮಂತ್ರಿಗಳು ಕಾರ್ಮಿಕರಿಗೆ ಆಶ್ವಾಸನೆ ನೀಡಿದ್ದರೂ ಗಿರಣಿ ಈವರೆಗೂ ಆರಂಭವಾಗಿಲ್ಲ.

ಕಳೆದ ಬುಧವಾರದಂದು ವಿಜಾಪುರದಿಂದ ಬಂದಿದ್ದ ೨೦೦ ಜನ ಕಾರ್ಮಿಕರು ಮುಖ್ಯಮಂತ್ರಿಯವರ ಮನೆಯಮುಂದೆ ಮತಪ್ರದರ್ಶನ ನಡೆಸಿದ್ದಾರೆ. ಕಾರ್ಮಿಕರೆಲ್ಲಾ ಈಗ ಬೀದಿಪಾಲಾಗಿದ್ದು ಅವರೆಲ್ಲಾ ನಿರ್ಗತಿಕರಾಗಿದ್ದಾರೆ. ಸಹಕಾರಿ ಕ್ಷೇತ್ರದ ಈ ನೂಲಿನ ಗಿರಣಿ ಅಪಾರವಾದ ಹಾನಿ ಅನುಭವಿಸಲು ಕಾರಣರಾರು ? ಇಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ತನಿಖೆ ನಡೆದು ಅಪರಾಧಿಗಳ ಮೇಲೆ ಕ್ರಮ ಕೈಕೊಳ್ಳಬೇಕು. ಸರ್ಕಾರ ಕೂಡಲೇ ಈ ಗಿರಣಿಯನ್ನು ತಾನೇ ಪಡೆಸಿಕೊಂಡು ಕಾರ್ಮಿಕರ ಕುಟುಂಬಗಳನ್ನು ಬದುಕಿಸಬೇಕು. ಈ ಗಿರಣಿಯ ಪುನರಾರಂಭದ ಕುರಿತು ಸಂಬಂಧಿಸಿದ ಸಚಿವರು ಕೈಕೊಂಡ ಕ್ರಮಗಳೇನು ? ಗಿರಣಿಯನ್ನು ಕೂಡಲೇ ಆರಂಭಿಸುವ ಕುರಿತು ಸರ್ಕಾರ ತೀವ್ರ ಕ್ರಮ ಕೈಕೊಳ್ಳುತ್ತದೆಯೇ ?